5C.R.P.67

| Form No.4 (Civil) Deposition Sheets (R.P.No.57) |
|---|

1 ನೇ ಅಪರ  ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ
ಎಸ್.ಸಿ. ನಂ. 97/2021

ದಿನಾಂಕ ಃ  04.07.2025  ರಂದು ಪ್ರಮಾಣ ವಚನ ಬೋದಿಸಲಾಗಿದೆ.

ಸಿ. ಡಬ್ಲ್ಯೂ:25 ಪಿ.ಡಬ್ಲ್ಯೂ :20

| | |
|---|---|
| ಸಾಕ್ಷಿದಾರರ ಹೆಸರು | ಪಿ ಸಿದ್ದರಾಜು |
| ತಂದೆಯ ಹೆಸರು | ಲೇಟ್ ತೋಪಯ್ಯ |
| ವಯಸ್ಸು | 57 ವರ್ಷ |
| ಉದ್ಯೋಗ | ಪಿಎಸ್ಐ, ಸಂಚಾರಿ ಪೊಲೀಸ್ ಠಾಣೆ, ಮಂಡ್ಯ. |
| ವಾಸ | ಮಂಡ್ಯ. |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

1) ದಿಃ 29.12.2016 ರಿಂದ ದಿಃ 06.07.2021 ರವರೆಗೆ ನಾನು ಮಂಡ್ಯ ಸೆಂಟ್ರಲ್ ಪೊಲೀಸ್ ಠಾಣೆಯಲ್ಲಿ ಎಎಸ್ಐ ಆಗಿ ಕಾರ್ಯ ನಿರ್ವಹಿಸಿದ್ದೆನು.

2) ದಿಃ 01.05.2021 ರಂದು ಈ ಪ್ರಕರಣದ ಸಂಬಂಧದಲ್ಲಿ ಮೃತ ಮಾದಪ್ಪ ರವರ ವಾರಸುದಾರರು ಇಲ್ಲದೇ ಇದ್ದುದರಿಂದ, ಸದರಿ ಮಾದಪ್ಪ ರವರ ಶವವನ್ನು ಮಂಡ್ಯದ ಕುವೆಂಪು ನಗರದಲ್ಲಿ ಇರುವ ಸಾರ್ವಜನಿಕ ಶ್ಮಶಾನದಲ್ಲಿ ಪೌರಕಾರ್ಮಿಕರ ಸಹಾಯದಿಂದ, ಪಂಚರ ಸಮಕ್ಷಮದಲ್ಲಿ ದಫನ್ ಮಾಡಿರುತ್ತೇನೆ. ಈ ಬಗ್ಗೆ ಮಹಜರ್ ಕ್ರಮವನ್ನು ಜರುಗಿಸಿ, ಪಂಚರ ಸಹಿಗಳನ್ನು ಪಡೆದಿರುತ್ತೇನೆ. ಸದರಿ ದಫನ್ ಮಹಜರ್ ನ್ನು ಸಾಕ್ಷಿಯು ನೋಡಿ

ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.22 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ.22(ಬಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಃ ಆರೋಪಿ ಪರ ಶ್ರಿಮತಿ ಡಿ ಎಸ್ ವಕೀಲರು, ಸಹಾಯಕ defence counsel ರವರಿಂದಃ**

3) ಪಂಚರಿಗೆ ನಾನು ನೋಟಿಸು ನೀಡಿಲ್ಲ ಎಂದರೆ ಸರಿ. ಹಿರಿಯ ಅಧಿಕಾರಿಗಳೊಂದಿಗೆ ಶರೀಕಾಗಿ, ಈ ಪ್ರಕರಣವನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ಪ್ರಕರಣದ ಸಂಖ್ಯೆಗಳನ್ನು ಹೆಚ್ಚಿಸಲು ಈ ಪ್ರಕರಣವನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ.22 ಮಹಜರನ್ನು ಠಾಣೆಯಲ್ಲಿ ಸೃಷ್ಟಿಸಿ ಹಾಜರು ಪಡಿಸಿರುತ್ತೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇರುವುದಿಲ್ಲ.**

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(**ಶಿವಪ್ರಸಾದ್ ಕೆ.ಬಿ**)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.